


## ನಿಜವಾದ ಭಕ್ತ

ಅನೇಕ ವರ್ಷಗಳ ಹಿಂದೆ ಕಾಶಿಕ್ಷೇತ್ರದ ಒಂದು ದೇವಸ್ಥಾನದ ಗರ್ಭಗುಡಿಯ ಮುಂಭಾಗದಲ್ಲಿ ಥಳಥಳನೆ ಹೊಳೆಯುತ್ತಿದ್ದ ಚಿನ್ನದ ತಟ್ಟೆಯೊಂದು ಬಿದ್ದಿತ್ತು. ಅರ್ಚಕರು ಆ ತಟ್ಟೆಯನ್ನು ಕಂಡು ಅದನ್ನು ಆಶ್ಚರ್ಯದಿಂದ ಕೈಗೆತ್ತಿಕೊಂಡರು. ಏನಾಶ್ಚರ್ಯ! ಥಳಥಳನೆ ಹೊಳೆಯುತ್ತಿದ್ದ ಚಿನ್ನದ ತಟ್ಟೆ ಕ್ಷಣ ಮಾತ್ರದಲ್ಲಿ ಕಬ್ಬಿಣದ ತಟ್ಟೆಯಾಗಿ ಬಿಟ್ಟಿತು! ಅರ್ಚಕರು ಭಯದಿಂದ ಆ ತಟ್ಟೆಯನ್ನು ಅಲ್ಲಿಯೇ ಇಟ್ಟಕೂಡಲೇ ಅದು ಮೊದಲಿನಂತೆ ಚಿನ್ನದ ತಟ್ಟೆಯಾಗಿ ಥಳಥಳನೆ ಹೊಳೆಯಲಾರಂಭಿಸಿತು. ಈ ಕುತೂಹಲಕರವಾದ ವಿಷಯವನ್ನು ಅರ್ಚಕರು ದೇವಸ್ಥಾನದ ಆಡಳಿತಗಾರರಿಗೆ ತಿಳಿಸಿದರು. ಅವರು ಬಂದು ಪರೀಕ್ಷಿಸಿದಾಗಲೂ ಹಾಗೆಯೇ ಆಯಿತು. ಅವರು ಆ ತಟ್ಟೆಯನ್ನು ಚೆನ್ನಾಗಿ ಪರಿಶೀಲಿಸಿದರು. ಆಗ "ಯಾರು ದಯಾವಂತರೊ, ಧರ್ಮಾತ್ಮರೊ ಅವರಿಗೆ ಈ ತಟ್ಟೆ ಸೇರುತ್ತದೆ. ಇದು ದೇವರ ಕಾಣಿಕೆ" ಎಂದು ತಟ್ಟೆಯ ಮೇಲೆ ಬರೆದಿದ್ದನ್ನು ಅವರು ಕಂಡರು! ಆಗ ಆಡಳಿತಗಾರರು, "ಇದು ಯಾರಿಗೆ ಸೇರಬೇಕಾಗಿದೆಯೋ ಅವರಿಗೆ ಸೇರಿಸುವುದು ನಮ್ಮ ಕರ್ತವ್ಯ" ಎಂದು ನಿರ್ಧರಿಸಿದರು.

ಚಿನ್ನದ ತಟ್ಟೆಯ ವಿಷಯ ಕುರಿತು ಆ ಪ್ರಾಂತ್ಯದಲ್ಲೆಲ್ಲಾ ಪ್ರಚಾರ ಮಾಡಿಸಿದರು. ಮಾರನೆಯ ದಿನ ದೇವಸ್ಥಾನದಲ್ಲಿ ತಟ್ಟೆಯನ್ನು ಪ್ರದರ್ಶನಕ್ಕೆ ಇಟ್ಟರು. ದೇವಸ್ಥಾನದ ಮಹಾದ್ವಾರದಲ್ಲಿ ನೂರಾರು ಜನ ನೆರೆದಿದ್ದರು. ಗೊತ್ತುಪಡಿಸಿಕೊಂಡಿದ್ದ ಸಮಯಕ್ಕೆ ಸರಿಯಾಗಿ ಭಕ್ತಾದಿಗಳಿಗೆ "ತಟ್ಟೆ ಮುಟ್ಟಿಸುವ ಕಾರ್ಯ" ಆರಂಭವಾಯಿತು. ಅದನ್ನು ನೂರಾರು ಜನ ಮುಟ್ಟಿದರು. ಆದರೆ ಅದು ಕಬ್ಬಿಣದ ತಟ್ಟೆಯೇ ಆಗುತ್ತಿತ್ತು.

ಹಲವು ತಿಂಗಳುಗಳು ಕಳೆದವು. ತಟ್ಟೆಯ ನಿಜವಾದ ವಾರಸುದಾರರು ದೊರೆಯಲಿಲ್ಲ. ದೇವಸ್ಥಾನದ ಆಡಳಿತಗಾರರಿಗೆ ಇದೊಂದು ಸಮಸ್ಯೆ ಆಯಿತು. ಒಂದು ದಿನ ಪ್ರಾತಃಕಾಲ ಒಬ್ಬ ಬಡರೈತ ದೇವಸ್ಥಾನಕ್ಕೆ ಬಂದ. ಅವನು ಹಾಕಿಕೊಂಡಿದ್ದ ಉಡುಪು ಅಲ್ಲಲ್ಲಿ ಹರಿದುಹೋಗಿತ್ತು. ಆದರೂ ಶುಭ್ರವಾಗಿತ್ತು. ಪಾಪ, ಅವನಿಗೆ ತಟ್ಟೆಯ ವಿಷಯ ಗೊತ್ತೇ ಇರಲಿಲ್ಲ. ದೇವರ ಪೂಜೆಗೆಂದು ಬಂದಿದ್ದ. ದೇವಸ್ಥಾನದ ಪಕ್ಕದಲ್ಲಿದ್ದ ಕಲ್ಯಾಣಿಯಲ್ಲಿ ಸ್ನಾನ ಮಾಡಿದ. ದಾರಿಯಲ್ಲಿ ಆರಿಸಿಕೊಂಡು ಬಂದಿದ್ದ ಹೂಗಳನ್ನು ಹಿಡಿದುಕೊಂಡು ಭಕ್ತಿಯಿಂದ ದೇವಸ್ಥಾನದ ಬಾಗಿಲಿಗೆ ಬಂದ. ಬಾಗಿಲಿನ ಅಕ್ಕಪಕ್ಕದಲ್ಲಿ ಕುಳಿತಿದ್ದ ಭಿಕ್ಷುಕರನ್ನು ಕಂಡ. ಅವನ ಹೃದಯ ಕರಗಿತು. ಅವರ ಬಳಿಗೆ ಹೋಗಿ ಪ್ರೀತಿಯಿಂದ ಅವರನ್ನು ಮಾತನಾಡಿಸಿದ. "ಕಷ್ಟಗಳನ್ನು ಸಹಿಸಿಕೊಳ್ಳಿ, ದೇವರನ್ನು ನಂಬಿ, ನಮ್ಮೆಲ್ಲರನ್ನೂ ಕಾಪಾಡುವವನು ಅವನೇ" ಎಂದು ಅವರನ್ನು ಸಂತೈಸಿದ. ಅವನ ಮಾತುಗಳಿಂದ ಭಿಕ್ಷುಕರಿಗೆ ಎಷ್ಟೋ ಸಮಾಧಾನ ಆಯಿತು. ರೈತ ಭಕ್ತಿಯಿಂದ ಪೂಜೆ ಸಲ್ಲಿಸಿದ; ತೀರ್ಥಪ್ರಸಾದಗಳನ್ನು ತೆಗೆದುಕೊಂಡ.

ಕಲೆ : ಸೋಮಶೇಖರ



ದೇವಸ್ಥಾನದ ಆಡಳಿತಗಾರರು ಆ ರೈತನನ್ನು ಕರೆದು ಅವನ ಕೈಗೂ ತಟ್ಟೆ ಕೊಟ್ಟರು—ಸ್ವಲ್ಪ ಅನುಮಾನದಿಂದಲೇ! ಆದರೆ, ಏನಾಶ್ಚರ್ಯ! ರೈತ ತಟ್ಟೆಯನ್ನು ಕೈಯಲ್ಲಿ ಹಿಡಿದಿದ್ದೇ ತಡ, ಅದು ಮೊದಲಿಗಿಂತಲೂ ಹೆಚ್ಚು ಪ್ರಕಾಶಮಾನವಾಗಿ ಬೆಳಗಿತು. ಇದನ್ನು ನೋಡುತ್ತಿದ್ದ ಆಡಳಿತಗಾರರ ಕಣ್ಣುಗಳಲ್ಲಿ ಆನಂದ ಬಾಷ್ಪಗಳು ಉದುರಿದುವು. ಅವರು ರೈತನಿಗೆ ತಟ್ಟೆಯ ವಿಷಯವನ್ನು ತಿಳಿಸಿದರು. "ದೇವರ ದೃಷ್ಟಿಯಲ್ಲಿ ನಿಜವಾದ ಭಕ್ತರು ನೀವೇ. ಈ ತಟ್ಟೆ ದೇವರಿಂದ ಬಂದಿರುವ ಕಾಣಿಕೆ. ನಿರಾಕರಿಸದೆ ತೆಗೆದುಕೊಳ್ಳಿ" ಎಂದು ಪ್ರಾರ್ಥಿಸಿದರು. "ದೇವರ ಮಾತಿಗೆ ಎದುರುಂಟೆ" ಎಂದ ರೈತ. ಆ ತಟ್ಟೆಯನ್ನು ಭಕ್ತಿಯಿಂದ ಸ್ವೀಕರಿಸಿದ.

ಯಾವ ಕೆಲಸವನ್ನೇ ಆಗಲಿ, ಶ್ರದ್ಧೆ-ಭಕ್ತಿಯಿಂದ ಮಾಡಬೇಕು, ಅಹಂಕಾರದಿಂದ ಮಾಡಬಾರದು ಮತ್ತು ದಯಾವಂತನಾಗಿರಬೇಕು. ಆಗ ಅವನಿಗೆ ಒಳ್ಳೆಯದೇ ಆಗುತ್ತದೆ. ರೈತ ಬಡವನಾದರೂ, ದಯಾವಂತನಾಗಿದ್ದ. ಆದ್ದರಿಂದಲೇ ಅವನಿಗೆ ಚಿನ್ನದ ತಟ್ಟೆ ದೊರೆಯಿತು. **(ಈ ಕಥೆಗೆ ಆಧಾರ : "ದಿ ಗೋಲ್ಡನ್ ಪ್ಲೇಟ್" ಎಂಬ ಒಂದು ಇಂಗ್ಲಿಷ್ ಕವನ)**

**ಕಥೆ : ಎಸ್. ಚೆನ್ನಪ್ಪ**